

# ಕುಶಿ ನಗರ ಬುದ್ಧ ನಿರ್ವಾಣದ ಸ್ಮೃತಿಗಳ ಆಗರ

ಬುದ್ಧನ ಜೀವನದ ನಾಲ್ಕು ಪ್ರಮುಖ ಘಟ್ಟಗಳಲ್ಲಿ ಕುಶಿನಗರ ಕೊನೆಯದು. ವಿಶ್ವದ ಅತ್ಯುತ್ತಮ ಶಿಲ್ಪಗಳಲ್ಲಿ ಒಂದಾದ ಬುದ್ಧನ ಪ್ರತಿಮೆ ಕುಶಿನಗರದ ಮಂದಿರದಲ್ಲಿದೆ. ಬುದ್ಧಪ್ರಿಯರ ನೆಚ್ಚಿನ ತಾಣದ ಇಣುಕುನೋಟ ಓದುಗರಲ್ಲಿ ಕುಶಿನಗರದ ಬಗ್ಗೆ ಸೆಳೆತ ಉಂಟುಮಾಡುವಂತಿದೆ.

■ ಎಸ್. ಪ್ರಭಾವತಿ



ಉತ್ತರ ಪ್ರದೇಶದ ರಾಷ್ಟ್ರೀಯ ಹೆದ್ದಾರಿ 28, ಕುಶಿನಗರ ಜಿಲ್ಲೆಯ ನಗರ ಪಂಚಾಯಿತಿಯ ಪುಟ್ಟ ಪಟ್ಟಣ ಈ ಕುಶಿನಗರ. ಇದು ಬುದ್ಧ ನಿರ್ವಾಣ ಹೊಂದಿದ ಸ್ಥಳ. ಗೋರಖ್‌ಪುರ ಉತ್ತರದ ಕೊನೆ ರೈಲ್ವೆ ನಿಲ್ದಾಣದಿಂದ 52 ಕಿ.ಮೀ. ದೂರದಲ್ಲಿ ಕುಶಿನಗರವಿದೆ. 'ಸಾರಾನಾಥ್ ಬುದ್ಧ ಎಕ್ಸ್‌ಪ್ರೆಸ್‌ವೇ' ರೈಲು ಬುದ್ಧನ ಜನನ, ಉಪದೇಶ ಹಾಗೂ ಮರಣಹೊಂದಿದ ಪ್ರಮುಖ ತಾಣಗಳನ್ನು ಪರಸ್ಪರ ನಿಕಟಗೊಳಿಸಿದೆ. ವಿದೇಶಿಯರಿಗೆ ಇದೊಂದು ಬುದ್ಧನ ಅಂತರರಾಷ್ಟ್ರೀಯ ಯಾತ್ರಾಕೇಂದ್ರ. ತಮ್ಮ ಜೀವಿತ ಅವಧಿಯಲ್ಲಿ ಒಮ್ಮೆಯಾದರೂ ನೋಡಲೇಬೇಕಾದ ಪವಿತ್ರತಾಣ ಇದೆಂದು ಬೌದ್ಧರು ನಂಬಿದ್ದಾರೆ.

ಈ ಕುಶಿನಗರ ಹಿಂದೆ ಕೋಸಲ ರಾಜ್ಯದ ರಾಜಧಾನಿಯಾಗಿತ್ತು. ಬೌದ್ಧರ ಪ್ರಕಾರ ಕುಶಾವತಿ ಶ್ರೀರಾಮನ ಮಗ ಕುಶನ ರಾಜ್ಯವಾಗಿತ್ತು. ಕ್ರಿಸ್ತಪೂರ್ವ 6ನೇ ಶತಮಾನದ 16 ಮಹಾಜನಪದರಲ್ಲಿ ಒಬ್ಬರಾಗಿದ್ದ ಮಲ್ಲರ ರಾಜಧಾನಿ ಇದಾಗಿತ್ತೆಂದು ಐತಿಹ್ಯ. ಮೌರ್ಯರು, ಶೃಂಗರು, ಕುಶಾನ ಮತ್ತು ಗುಪ್ತ ವಂಶಗಳು ಈ ನಗರದೊಡನೆ ಸಂಪರ್ಕ ಹೊಂದಿದ್ದರೆಂದು ಪ್ರಾಚ್ಯವಸ್ತು ಇಲಾಖೆ ಶೋಧನಾ ಕಾರ್ಯ ಕೈಗೊಂಡ ಅಧಿಕಾರಿ ಎ. ಕನ್ನಿಂಗ್ ಹ್ಯಾಮ್ ಅಭಿಪ್ರಾಯಪಟ್ಟಿದ್ದಾರೆ. ಮುಂದೆ ಬಂದ ಸಿ.ಕೆ ಕಾರ್ಲ್ಲೆ ಅವರು ಸ್ತೂಪ ಹಾಗೂ 6.10 ಮೀ. ಉದ್ದದ, ಒರಗಿ ಮಲಗಿರುವ ಬುದ್ಧನ ಮೂರ್ತಿಯನ್ನು 1876ರಲ್ಲಿ ಪತ್ತೆಹಚ್ಚಿದರು. 1907ರಲ್ಲಿ ಬುದ್ಧನಿಗೆ ಸೇರಿದ್ದ ಪಳಿಯುಳಿಕೆ ಪತ್ತೆಯಾಯಿತು. ಚಾಂದ್ರ ಸ್ವಾಮಿಯೆಂಬ ಬರ್ಮಿ ಭಿಕ್ಷು 1903ರಲ್ಲಿ ಬುದ್ಧನ ಮಹಾಪರಿನಿರ್ವಾಣ ನಿರ್ಮಿಸಿದನು.

## ಮಹಾ ಪರಿನಿರ್ವಾಣ ಮಂದಿರ

ಕುಶಿನಗರದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಮಹಾ ಪರಿನಿರ್ವಾಣ ಮಂದಿರ 1927ರಲ್ಲಿ ಪುನರ್ ನಿರ್ಮಾಣಗೊಂಡಿದೆ. ವಿಶಾಲವಾದ ಹುಲ್ಲಿನ ಹಾಸು, ಉತ್ಖನನದ ಪಳೆಯುಳಿಕೆಗಳು, ನಿರ್ಮಲವಾದ ಪ್ರದಕ್ಷಿಣಾ ಪಥದಿಂದ ಸುತ್ತುವರಿದಿರುವ ಮಂದಿರವಿದು. ಈ ಮಂದಿರದಲ್ಲಿರುವ 6.10 ಮೀಟರ್‌ಉದ್ದದ ಬುದ್ಧನ ಮೂರ್ತಿ ವಿಶ್ವದಲ್ಲೇ ಅದ್ವಿತೀಯ ಶಿಲ್ಪ ಕೃತಿ. ವಿವಿಧ ಸ್ಥಳದಲ್ಲಿ ನಿಂತು ನೋಡಿದರೆ ವಿವಿಧ ವಿನ್ಯಾಸದಲ್ಲಿ ಕಾಣುವ ಮೂರ್ತಿಯಿದು. ಕಾಲಿನ ಸಮೀಪದಿಂದ ಮೃತ್ಯು ಅವಸ್ಥೆ, ಹೊಟ್ಟೆಯ ಸಮೀಪದಿಂದ ಚಿಂತನಾಮಗ್ನ, ತಲೆಯ ಸಮೀಪದಿಂದ ಮುಗುಳುನಗೆಯ ಬುದ್ಧನ ಮೂರ್ತಿಯ ದರ್ಶನವಾಗುತ್ತದೆ. ಈ ವಿಗ್ರಹಕ್ಕೆ ಜವಾಹರಲಾಲ್ ನೆಹರೂ ಅವರು ಅಂದಿಗೆ ಸುಮಾರು ಮೂರು ಲಕ್ಷ ರೂಪಾಯಿ ಧನಸಹಾಯ ಮಾಡಿ ಚೆನ್ನದ

